ಸದಸ್ಯರು ಆಗಿದ್ದರು. ಅಲ್ಲದೆ ಆ ಎರಡೂ ಜಿಲ್ಲೆಗೆ ಸೇರಿದವರಾಗಿರುವುದರಿಂದ ಅದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅದನ್ನು ಉಳಿಸುವಂಥ ಕೆಲಸ ಮಾಡುತ್ತಾರೆ ಎನ್ನುವ ಭರವಸೆ ನಮ್ಮಲಿದೆ.

ಅಧ್ಯಕ್ಷರು :– ಆಯಿತು, ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದು ಗಮನ ಸೆಳೆಯುವುದು.

ಶ್ರೀ ಡಿ.ಎ. ಸದಾನಂದಗೌಡ :– ಮಾನ್ಯ ಅಭಯಚಂದ್ರರವರು ಸಕ್ಕರೆಯಂಥ ಮನುಷ್ಯ ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಿ ಈಗ ನಾನು ಎಂ.ಎಲ್.ಎ. ಗಳನ್ನು ಮತ್ತು ಬಾಕಿಯವರೆನ್ನೆಲ್ಲಾ ಕರೆಸಿ ನಾನು finance ನವರೊಂದಿಗೆ ಮಾತನಾಡಿಕೊಂಡು ಇದಕ್ಕೇನಾದರೂ ಪರಿಹಾರ ಮಾಡಲಿಕ್ಕೆ ಸಾಧ್ಯವಾದರೆ ನಾನು ಪ್ರಯತ್ನ ಮಾಡುತ್ತೇನೆ. ಅದಕ್ಕೆ ಬೇಕಾದರೆ ನಿಮ್ಮನ್ನೆಲ್ಲಾ ಕರೆಸಿ ಮಾತನಾಡುವಂಥ ಕೆಲಸಕಾರ್ಯವನ್ನು ನಾನು ಮಾಡುತ್ತೇನೆ.

ಅಧ್ಯಕ್ಷರು :– ಆಯಿತು, ತಾವು ಕುಳಿತುಕೊಳ್ಳಿ ಆಚಾರ್ಯರ ಹೆಸರನ್ನು ಆಗಾಗ ಹೇಳಬೇಡಿ. ಮಾನ್ಯ ಪ್ರಕಾಶ್‌ರವರೇ ತಾವು ಮಾತನಾಡಿ.

7. ವಿಷಯ :– ಹಾಸನದ ಇಂಜಿನಿಯರಿಂಗ್ ಸರ್ಕಾರಿ ಕಾಲೇಜಿಗೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ.

ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ) :– ಹಾಸನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಏನು ಹಣ ಬಿಡುಗಡೆಯಾಗಿದೆ ಆ ಬಿಡುಗಡೆಯಾದ ಹಣ ಉಳಿದಿದೆ. ಅದರಲ್ಲಿ ಮೂಲಭೂತ ಸೌಕರ್ಯವಾದಂಥ furniture ಗಳನ್ನೆಲ್ಲಾ purchase ಮಾಡುವುದಕ್ಕೆ ಅನುಮತಿ ಬೇಕಾಗಿದೆ. ದಯಮಾಡಿ ಅನುಮತಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಯಾವುದು ?

ಶ್ರೀ ಪ್ರಕಾಶ್ ಹೆಚ್.ಎಸ್. :– ಸರ್ಕಾರಿ ಇಂಜಿನಿಯರ್ ಕಾಲೇಜಿನಲ್ಲಿ ಹಣ ಬಿಡುಗಡೆ ಮಾಡಿದ್ದರು. ಆ ಬಿಡುಗಡೆ ಮಾಡಿದಂಥ ಹಣದಲ್ಲಿ ಉಳಿದಿರುವ ಹಣ ಏನಿದೆ ಅದರಲ್ಲಿ ಅಲ್ಲಿ ಮೂಲಭೂತ ಸೌಲಭ್ಯ ಒದಗಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಹಾಸನ ಸರ್ಕಾರಿ ಇಂಜಿನಿಯರ್ ಕಾಲೇಜಿನ ಬಗ್ಗೆ ಬೆಳಿಗ್ಗೆ ತಾವು ಶೂನ್ಯ ವೇಳೆಯಲ್ಲಿ ಉತ್ತರ ಕೊಟ್ಟಿದ್ದೀರಿ. ಗಮನ ಸೆಳೆಯುವ ಸೂಚನೆಯಲ್ಲೂ ಇತ್ತು. ಎರಡರಲ್ಲೂ ಹಾಕಿದ್ದರು ಮಾನ್ಯ ಪ್ರಕಾಶ್‌ರವರು. ಅಲ್ಲಿ ದುಡ್ಡಿದೆ. ಬೆಂಚು ಕುರ್ಚಿ

ತೆಗೆದುಕೊಳ್ಳುವುದಕ್ಕೆ ತಾವು ಅನುಮತಿ ಕೊಟ್ಟರೆ ಸಾಕು. ನಾವೆಲ್ಲಾ ಸೇರಿ 10 ಲಕ್ಷ ರೂಪಾಯಿ ಕೊಡಿಸಿದ್ದೇವೆ. ಹುಡುಗರು ನೆಲದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಪ್ರಧಾನ ಕಾರ್ಯದರ್ಶಿಯವರಿಗೆ ಒಂದು ಮಾತನ್ನು ಹೇಳಿದರೆ ಸಾಕು ಸಾರ್. ದುಡ್ಡು ಅವರ ಹತ್ತಿರವೇ ಇದೆ. ನೀವು ಒಂದು ಮಾತು ಹೇಳಿ ಸಾರ್.

ಶ್ರೀ ಡಿ.ವಿ. ಸದಾನಂದ ಗೌಡ :– ನೋಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ನೋಡುತ್ತೇವೆ ಎನ್ನಬೇಡಿ. ತಾವು ಒಂದು ಮಾತು ಹೇಳಿ ಸಾರ್. **ಅಧ್ಯಕ್ಷರು :–** ಹೇಳುತ್ತೇವೆಂದು ಹೇಳಿದ್ದಾರೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 8 ಗಂಟೆ 38 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 29–3–2012 ರಂದು ಬೆಳಿಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)

ಅಂಗನವಾಡಿ ಕೇಂದ್ರಗಳ ಆಹಾರ ವಿತರಣೆ

10. ಅನುಬಂಧ – 1

115 : (26)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಅ) ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸ್ಥಳೀಯ ಸಂಘ ಸಂಸ್ಥೆಗಳಿಂದ ಅಂಗನವಾಡಿ ಕೇಂದ್ರಗಳಿಗೆ ಧಾನ್ಯ ವಿತರಣೆ ಮಾಡದೆ ಆದೇಶ ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಮಾನ್ಯ ಉಚ್ಚ ನ್ಯಾಯಾಲದ ಆದೇಶ ಉಲ್ಲಂಘನೆ ಮಾಡುತ್ತಿರುವವರ ಹಾಗೂ ಪಾರದರ್ಶಕ ಕಾಯಿದೆ ಉಲ್ಲಂಘನೆ ಮಾಡುತ್ತಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು) ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)

ಅ) ಸರ್ವೋಚ್ಚ ನ್ಯಾಯಾಲಯದ ನಿರ್ದೇಶದನ್ವಯ ಅಂಗನವಾಡಿ ಕೇಂದ್ರಗಳಿಗೆ ಆಹಾರ ಧಾನ್ಯಗಳನ್ನು ಸ್ವಸಹಾಯ ಸಂಘದ ಸದಸ್ಯರಿಂದ ರಚಿಸಿ ನೋಂದಾಯಿಸಿದ 137 ಸ್ಥಳೀಯ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನೆ ಮತ್ತು ತರಬೇತಿ ಕೇಂದ್ರಗಳ ಮೂಲಕ ಸರಬರಾಜು ಮಾಡಲಾಗುತ್ತಿದೆ.